# ದೇಶದಲ್ಲೇ ಬೆಂಗಳೂರು ನಂ.1 ವಾಸಯೋಗ್ಯ ನಗರ!

## ಪುಣೆ ನಂ.2, ಅಹಮದಾಬಾದ್ ನಂ.3 : ಹುಬ್ಬಳ್ಳಿಗೆ 37ನೇ ಸ್ಥಾನ . 10 ಲಕ್ಷಕ್ಕಿಂತ ಕಡಿಮೆ ಜನರ ನಗರದಲ್ಲಿ ದಾವಣಗೆರೆ ನಂ.9

– [illegible] ಕೈ.ಪ್ರ. 5|3|21

ಭಾರತದ 111 ವಾಸಯೋಗ್ಯ ನಗರಗಳ ಸಮಗ್ರ ಪಟ್ಟಿಯಲ್ಲಿ 'ಸಿಲಿಕಾನ್ ಸಿಟಿ' ಎಂದೇ ಖ್ಯಾತವಾದ ಬೆಂಗಳೂರು ಮೊದಲ ಸ್ಥಾನ ಗಳಿಸಿದೆ. ಇದರೊಂದಿಗೆ ಕರ್ನಾಟಕದ ರಾಜಧಾನಿಯ ಕಿರೀಟಕ್ಕೆ ಮತ್ತೊಂದು ಗರಿ ಲಭಿಸಿದಂತಾಗಿದೆ. ಇದೇ ವೇಳೆ ಹುಬ್ಬಳ್ಳಿ–ಧಾರವಾಡ ಮಹಾನಗರಕ್ಕೆ ದೇಶದಲ್ಲೇ 37ನೇ ಸ್ಥಾನ ಲಭಿಸಿದೆ. ಇನ್ನು 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ವಾಸಯೋಗ್ಯ ನಗರಗಳ ಪಟ್ಟಿಯನ್ನು ಪ್ರತ್ಯೇಕವಾಗಿ [illegible], ಇದರಲ್ಲಿ ರಾಜ್ಯದ [illegible] [illegible]. ದಾವಣಗೆರೆ 9ನೇ ಸ್ಥಾನ ಪಡೆದಿದೆ. [illegible] [illegible] [illegible]. [illegible]

### [illegible] ವಾಸಯೋಗ್ಯ ನಗರ 5

1. ಬೆಂಗಳೂರು (ಕರ್ನಾಟಕ)
2. ಪುಣೆ (ಮಹಾರಾಷ್ಟ್ರ)
3. ಅಹಮದಾಬಾದ್ (ಗುಜರಾತ್)
4. ಚೆನ್ನೈ (ತಮಿಳುನಾಡು)
5. ಸೂರತ್ (ಗುಜರಾತ್)

### [illegible]



### [illegible] ವಾಸಯೋಗ್ಯ ನಗರ 5

1. ದಾವಣಗೆರೆ (ದೇಶಕ್ಕೆ ನಂ.9)
2. ಮಂಗಳೂರು (ದೇಶಕ್ಕೆ ನಂ.20)
3. ತುಮಕೂರು (ದೇಶಕ್ಕೆ ನಂ.[illegible])
4. ಶಿವಮೊಗ್ಗ (ದೇಶಕ್ಕೆ ನಂ.[illegible])
5. ಬೆಳಗಾವಿ (ದೇಶಕ್ಕೆ ನಂ.47)

### [illegible]



ಉತ್ತಮ ಜೀವನಮಟ್ಟ, ಆರ್ಥಿಕಾಭಿವೃದ್ಧಿ, ನಾಗರಿಕ ಸೇವೆಗಳಿಂದಾಗಿ ಇಡೀ ದೇಶದಲ್ಲೇ ಸುಲಭ ಜೀವನ ನಡೆಸಲು ಬೆಂಗಳೂರು ಅತ್ಯಂತ ವಾಸಯೋಗ್ಯ ನಗರ ಎನ್ನುವ ಹಿರಿಮೆ ಗಳಿಸಿದೆ. ಇದಕ್ಕೆ ಕಾರಣರಾದವರು ಎಲ್ಲ ಇಲಾಖೆ, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಭಿನಂದನೆಗಳು. ಬೆಂಗಳೂರಿನ ಸರ್ವಾಂಗೀಣ ಪ್ರಗತಿ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮುಂದುವರಿಸಲಾಗುವುದು.

– ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

# ಬೆಂಗಳೂರು ನಂ.1

ನವದೆಹಲಿ, ಅಕ್ಟೋಬರ್ 2 (ಪಿಟಿಐ): 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರ ಹಾಗೂ 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರಗಳ ಪಟ್ಟಿ– ಈ ರೀತಿ ಜನಸಂಖ್ಯೆ ಆಧಾರದ ಮೇಲೆ 2 ಪಟ್ಟಿ [illegible] ಬಿಡುಗಡೆ ಮಾಡಲಾಗಿದೆ. 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ 49 ನಗರ ಹಾಗೂ 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ 62 ನಗರಗಳು ಪಟ್ಟಿಯಲ್ಲಿದ್ದವು.

10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ [illegible] ನಗರಗಳಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಪುಣೆ, ಅಹಮದಾಬಾದ್, ಚೆನ್ನೈ, ಸೂರತ್, ನವಿ ಮುಂಬೈ, ಕೊಯಮತ್ತೂರು, ವಡೋದರಾ ಹಾಗೂ ಗ್ರೇಟರ್ ಮುಂಬೈ ಇವೆ. ದೆಹಲಿ 13ನೇ ಸ್ಥಾನದಲ್ಲಿದ್ದರೆ ಜಮ್ಮು–ಕಾಶ್ಮೀರ ರಾಜಧಾನಿ ಶ್ರೀನಗರ ಕೊನೆಯ ಸ್ಥಾನದಲ್ಲಿದೆ.

ಈ ಮಧ್ಯೆ, 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರಗಳಲ್ಲಿ ಹಿಮಾಚಲ ಪ್ರದೇಶದ ಶಿಮ್ಲಾ ಮೊದಲ ಸ್ಥಾನ ಗಳಿಸಿದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಭುವನೇಶ್ವರ, ಸಿಲ್ವಾಸಾ, ಕಾಕಿನಾಡ, ಸೇಲಂ, ವೆಲ್ಲೂರು, ಗಾಂಧಿನಗರ, ಗುರುಗ್ರಾಮ, ದಾವಣಗೆರೆ, ತಿರುಚಿರಾಪಳ್ಳಿ ಇವೆ. ಮುಜಾಫರ್‌ಪುರ ಕೊನೆ ಸ್ಥಾನದಲ್ಲಿದೆ.

**ಪಾಲಿಕೆಗಳ ಸಾಧನೆ– ದೆಹಲಿ ನಂ.1:** ಮಹಾನಗರ ಪಾಲಿಕೆಗಳ ಸಾಧನೆ ಆಧರಿತ 2 ಪ್ರತ್ಯೇಕ ಪಟ್ಟಿಗಳನ್ನು ಬಿಡುಗಡೆ ಮಾಡಲಾಗಿದೆ.

[illegible]

| ರ‍್ಯಾಂಕ್/ಸ್ಥಾನ | ನಗರ | ಅಂಕ |
|---|---|---|
| 21 | ಹುಬ್ಬಳ್ಳಿ-ಧಾರವಾಡ | [illegible] |
| 31 | ಬೆಳಗಾವಿ | [illegible] |

[illegible]

| ರ‍್ಯಾಂಕ್/ಸ್ಥಾನ | ನಗರ | ಅಂಕ |
|---|---|---|
| 23 | ತುಮಕೂರು | [illegible] |
| [illegible] | ಬೆಳಗಾವಿ | [illegible] |
| [illegible] | ಶಿವಮೊಗ್ಗ | [illegible] |
| [illegible] | ಮಂಗಳೂರು | [illegible] |
| [illegible] | ದಾವಣಗೆರೆ | [illegible] |

ಇದರ ಜತೆಗೆ 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಹಾಗೂ 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ನಗರಗಳ ಪಟ್ಟಿ ಕೊಡಲಾಗಿದೆ. 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ನಗರಪಾಲಿಕೆಗಳ ಸಾಧನೆಯಲ್ಲಿ ದೆಹಲಿ ಮಹಾನಗರ ಪಾಲಿಕೆ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಕ್ರಮವಾಗಿ ತಿರುಪತಿ, ಗಾಂಧಿನಗರ, ಕರ್ನಾಲ್, ಸೇಲಂ, ತಿರುಪ್ಪೂರ್, ಬಿಲಾಸಪುರ, ಉದಯಪುರ, ಝಾನ್ಸಿ ಹಾಗೂ ತಿರುನೆಲ್ವೇಲಿ ಇವೆ.

10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ನಗರಪಾಲಿಕೆಗಳಲ್ಲಿ ಇಂದೋರ್ ಮೊದಲ ಸ್ಥಾನ ಗಳಿಸಿದೆ. ಭೋಪಾಲ್, ಪಿಂಪ್ರಿ ಚಿಂಚ್ವಾಡ್, ಪುಣೆ, ಅಹಮದಾಬಾದ್, ಗ್ರೇಟರ್ ಮುಂಬೈ ಹಾಗೂ ವಡೋದರಾ ನಂತರದ ಸ್ಥಾನದಲ್ಲಿವೆ.